**ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ ಹಾವೇರಿ.**

ಸಂ ಜಿ2 /ಖಾ.ಪ್ರೌ.ಶಾ/ಪ್ರ.ಮ/ 1692 /2014-15 ದಿನಾಂಕ: 14/8/2014

-:ಜ್ಞಾಪನಾ:-

ವಿಷಯ :- ಬಳ್ಳಾರಿ ರುದ್ರಪ್ಪ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಮೊಟೇಬೆನ್ನೂರು, ತಾ: ಬ್ಯಾಡಗಿ, ಜಿ: ಹಾವೇರಿ. ಈ ಶಾಲೆಗೆ ಪ್ರಥಮ ಮನ್ನಣೆ ನೀಡುವ ಕುರಿತು.

ಉಲ್ಲೇಖ:-1) ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ಯಾಡಗಿ ಇವರ ಪತ್ರ ದಿನಾಂಕ: 13-08-2014

2) ಈ ಕಚೇರಿಯ ವಿಷಯ ಪರಿವೀಕ್ಷಕರ ಸಂದರ್ಶನಾ ವರದಿ ದಿನಾಂಕ: 14/8/2014

ಪೀಠಿಕೆ :-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ರುದ್ರಪ್ಪ ಶಿಕ್ಷಣ ಸಂಸ್ಥೆಯ ಎಜ್ಯುಕೇಷನ್ ಟ್ರಸ್ಟ (ರಿ) ಮೊಟೇಬೆನ್ನೂರು ಈ ಆಡಳಿತ ಮಂಡಳಿಯಡಿ ನಡೆಯುತ್ತಿರುವ ಬಳ್ಳಾರಿ ರುದ್ರಪ್ಪ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಮೊಟೇಬೆನ್ನೂರು, ತಾ: ಬ್ಯಾಡಗಿ, ಜಿ: ಹಾವೇರಿ ಈ ಶಾಲೆಯು ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ಆದೇಶ ಸಂಖ್ಯೆ:ಜಿ4/ ಶಾಶಿಅ/ಹೊ.ಪ್ರೌ.ಶಾ/ಆ,ಮ/ವಿ,ವ/65/2011-12, ದಿನಾಂಕ: 05-04-2012 ರನ್ವಯ ಶಾಲೆ ಪ್ರಾರಂಭಿಸಲು ಅನುಮತಿ ಪಡೆದು 2012-2013 ನೇ ಸಾಲಿನಿಂದ ಸ್ವಾಭಾವಿಕ ಬೆಳವಣಿಗೆಯೊಂದಿಗೆ ಪ್ರಾರಂಭವಾಗಿದ್ದು ಮೇಲ್ಕಂಡ ಉಲ್ಲೇಖ 1 ರಲ್ಲಿ ಪ್ರಥಮ ಮನ್ನಣೆ ನೀಡುವ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ಯಾಡಗಿ ಇವರು ಶಿಫಾರಸ್ಸಿನೊಂದಿಗೆ ಪ್ರಸ್ಥಾವನೆ ಕಳುಹಿಸಿದ ಹಿನ್ನೆಲೆಯಲ್ಲಿ ಹಾಗೂ ದಿನಾಂಕ: 12-8-2014 ರ ಶಾಲಾ ಸಂದರ್ಶನ ವರದಿ ಆಧರಿಸಿ ಈ ಕೆಳಗಿನ ಷರತ್ತುಗಳಿಗೊಳಪಟ್ಟು ಶಾಶ್ವತ ಅನುದಾನ ರಹಿತವಾಗಿ ಪ್ರಥಮ ಮನ್ನಣೆ ನೀಡಿ ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ** : -

ಮೇಲ್ಕಂಡ ಪೀಠಿಕೆ ಆಧರಿಸಿ ಬಳ್ಳಾರಿ ರುದ್ರಪ್ಪ ಶಿಕ್ಷಣ ಸಂಸ್ಥೆಯ ಎಜ್ಯುಕೇಷನ್ ಟ್ರಸ್ಟ (ರಿ) ಮೊಟೇಬೆನ್ನೂರು ಈ ಆಡಳಿತ ಮಂಡಳಿಯಡಿ ನಡೆಯುತ್ತಿರುವ ಬಳ್ಳಾರಿ ರುದ್ರಪ್ಪ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಮೊಟೇಬೆನ್ನೂರು, ತಾ: ಬ್ಯಾಡಗಿ, ಜಿ: ಹಾವೇರಿ ಈ ಶಾಲೆಗೆ ಈ ಕೆಳಗಿನಂತೆ ಪ್ರಥಮ ಮನ್ನಣೆಯನ್ನು ಶಾಶ್ವತ ಅನುದಾನ ರಹಿತವಾಗಿ ನೀಡಿ ಆದೇಶಿಸಿದೆ.

1. 2012-13 ನೇ ಸಾಲಿಗೆ 8 ನೇ ತರಗತಿಯ ಒಂದು ವಿಭಾಗಕ್ಕೆ (ಅನುದಾನ ರಹಿತವಾಗಿ ಆಂಗ್ಲ ಮಾಧ್ಯಮದಲ್ಲಿ) ಪ್ರಥಮ ಮನ್ನಣೆಯನ್ನು ಘಟನೋತ್ತರವಾಗಿ ನೀಡಿದೆ.
2. 2013-14 ನೇ ಸಾಲಿನಲ್ಲಿ ಅನುದಾನ ರಹಿತವಾಗಿ ಆಂಗ್ಲ ಮಾಧ್ಯಮದಲ್ಲಿ 09 ನೇ ವರ್ಗದ ಒಂದು ವಿಭಾಗಕ್ಕೆ ಆಂಗ್ಲ ಮಾಧ್ಯಮದಲ್ಲಿ ಅನುದಾನ ರಹಿತವಾಗಿ ಪ್ರಥಮ ಮನ್ನಣೆಯನ್ನು ಘಟನೋತ್ತರವಾಗಿ ನೀಡಿದೆ.
3. 2014-15 ನೇ ಸಾಲಿನಲ್ಲಿ ಅನುದಾನ ರಹಿತವಾಗಿ ಆಂಗ್ಲ ಮಾಧ್ಯಮದಲ್ಲಿ 10 ನೇ ವರ್ಗದ ಒಂದು ವಿಭಾಗಕ್ಕೆ ಆಂಗ್ಲ ಮಾಧ್ಯಮದಲ್ಲಿ ಅನುದಾನ ರಹಿತವಾಗಿ ಪ್ರಥಮ ಮನ್ನಣೆ ನೀಡಿದೆ.

**ಷರತ್ತುಗಳು :-**

1. ಮಾನ್ಯತೆ ನವೀಕರಣ ನೀಡಿದಂತೆ ತರಗತಿಗಳನ್ನು ನಡೆಸತಕ್ಕದ್ದು
2. ಶಾಲೆಯಲ್ಲಿ ನಿಗದಿತ ತರಬೇತಿ ಹಾಗೂ ವಿದ್ಯಾರ್ಹತೆ ಪಡೆದ ಶಿಕ್ಷಕರನ್ನು ಮಾತ್ರ ನೇಮಿಸಿಕೊಳ್ಳತಕ್ಕದ್ದು.
3. ಶಾಲೆಯು ಸುಸಜ್ಜಿತ ಕಟ್ಟಡ, ಆಟದ ಮೈದಾನ, ಪೀಠೋಪಕರಣ ಇತ್ಯಾದಿ ಮೂಲಭೂತ ಸೌಕರ್ಯ ಹೊಂದಿರ ತಕ್ಕದ್ದು.
4. ಉಲ್ಲೇಖ-1 ರನ್ವಯ ಪ್ರತಿ ತರಗತಿಯಲ್ಲಿ ನಿಗದಿತ ವಿದ್ಯಾರ್ಥಿಗಳ ಸಂಖ್ಯಾಬಲ ಕಾಯ್ದುಕೊಳ್ಳತಕ್ಕದ್ದು.
5. ಶಿಕ್ಷಣ ಮಸೂದೆಯನ್ವಯ ಇಲಾಖೆ ವಿಧಿಸಿದ ಷರತ್ತಿಗೆ ಬದ್ದರಾಗತಕ್ಕದ್ದು.
6. ಶಾಲೆಗೆ ನೀಡಿದ ಮನ್ನಣೆಯನ್ನು ರದ್ದು ಪಡಿಸುವ ಅಧಿಕಾರ ಈ ಕಛೇರಿ ಮತ್ತು ಇಲಾಖೆಗೆ ಇರುತ್ತದೆ.
7. ಸರಕಾರ ನಿಗದಿ ಪಡಿಸಿದ ಫೀ ಹಣವನ್ನು ಮಾತ್ರ ಆಕರಿಸತಕ್ಕದ್ದು ಈ ಕುರಿತು ಸಾರ್ವಜನಿಕರಿಂದ ದೂರು ಸ್ವೀಕೃತವಾದಲ್ಲಿ ಶಾಲೆಗೆ ನೀಡಿದ ಮಾನ್ಯತೆಯನ್ನು ರಧ್ದು ಗೊಳಿಸಲಾಗುವದು.
8. ಶಾಲಾ ಸಿಬ್ಬಂಧಿಗೆ ನಿಯಮಾನುಸಾರ ಸೇವಾ ಸೌಲಭ್ಯವನ್ನು ಕಡ್ಡಾಯವಾಗಿ ನೀಡತಕ್ಕದ್ದು ತಪ್ಪಿದಲ್ಲಿ ಶಾಲೆಗೆ ನೀಡಿದ ಮಾನ್ಯತೆಯನ್ನು ರದ್ದು ಗೊಳಿಸಲಾಗುವದು.

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ ಹಾವೇರಿ.

ಗೆ,

1) ಅಧ್ಯಕ್ಷರು/ಕಾರ್ಯದರ್ಶಿಗಳು ಬಳ್ಳಾರಿ ರುದ್ರಪ್ಪ ಶಿಕ್ಷಣ ಸಂಸ್ಥೆಯ ಎಜ್ಯುಕೇಷನ್ ಟ್ರಸ್ಟ (ರಿ) ಮೊಟೇಬೆನ್ನೂರು. ತಾ: ಬ್ಯಾಡಗಿ ಜಿ: ಹಾವೇರಿ

2) ಮುಖ್ಯೋಪಾಧ್ಯಾಯರು, ಬಳ್ಳಾರಿ ರುದ್ರಪ್ಪ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಮೊಟೇಬೆನ್ನೂರು, ತಾ: ಬ್ಯಾಡಗಿ, ಜಿ: ಹಾವೇರಿ

3) ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ಯಾಡಗಿ, ಇವರಿಗೆ ಈ ಮೇಲೆ ವಿಧಿಸಿದ ಹಾಗೂ ಉಲ್ಲೇಖ-1 ರಲ್ಲಿಯ ಷರತ್ತನ್ನು ಶಾಲೆಯಲ್ಲಿ ಪಾಲಿಸುತ್ತಿರುವ ಬಗ್ಗೆ ಕಾಲಕಾಲಕ್ಕೆ ಶಾಲಾ ಸಂದರ್ಶನ ನೀಡಿ ಪರೀಕ್ಷಿಸತಕ್ಕದ್ದು.